(ಆ) ಪ್ರತಿ ತಿಂಗಳು ಒದಗಿಸಬೇಕಾದ ೨,೦೦,೦೦೦ ಟನ್ ಬದಲಾಗಿ ಏಪ್ರಿಲ್ ೧೯೯೦ ರಲ್ಲಿ ೧,೯೨,೭೩೭ ಟನ್ ಮತ್ತು ಮೇ ೧೯೯೦ ರಲ್ಲಿ ೧,೭೨,೯೩೮ ಟನ್ ಕಲ್ಲಿದ್ದಲನ್ನು ಸರಬರಾಜು ಮಾಡಲಾಗಿದೆ. ಜೂನ್ ೧೯೯೦ ರಲ್ಲಿಯೂ ಕೂಡ ಕಲ್ಲಿದ್ದಲಿನ ಸರಬರಾಜು ಅಸಮರ್ಪಕವಾಗಿದೆ ಮತ್ತು ೧೧ನೇ ಜೂನ್ ೧೯೯೦ರ ವರೆಗೆ ಒದಗಿಸಬೇಕಾದ ೭೭,೦೦೦ ಟನ್‌ಗೆ ಬದಲಾಗಿ ಬರಿ ೫೪೪,೭೩೧ ಟನ್ ಕಲ್ಲಿದ್ದಲು ಬಂದಿವೆ.

(ಇ) ಕಲ್ಲಿದ್ದಲು ಸರಬರಾಜನ್ನು ಉತ್ತಮಪಡಿಸಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ.

(ಈ) ೨ ಲಕ್ಷ ಟನ್ ಕಲ್ಲಿದ್ದನ್ನು ಆಮದು ಮಾಡಿಕೊಳ್ಳಲು ರಾಜ್ಯ ಸರ್ಕಾರಕ್ಕೆ ಅನುಮತಿ ನೀಡಬೇಕೆಂದು ಕೇಂದ್ರ ಸರ್ಕಾರವನ್ನು ಕೋರಲಾಗಿದೆ.

ಧಾರವಾಡದಲ್ಲಿ ಉದ್ದಿಮೆ ಬೆಳವಣಿಗೆ ಕುರಿತು ಕೈಗೊಂಡ ಕ್ರಮಗಳ ಬಗ್ಗೆ

೭೭೯ ಶ್ರೀ ಎಸ್. ಆರ್. ಮೋರೆ (ಧಾರವಾಡ).—ಮಾನ್ಯ ಕೈಗಾರಿಕಾ ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಧಾರವಾಡದಲ್ಲಿ ಉದ್ದಿಮೆ ಬೆಳವಣಿಗೆಯ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು ?

(ಆ) ಧಾರವಾಡ ಸಮೀಪದ ಬೇಲೂರು ಔದ್ಯಮಿಕ ವಸಾಹತುವಿನಲ್ಲಿ ಅಪೇಕ್ಷಿತ ಉದ್ದಿಮೆಗಳ ಪ್ರಾರಂಭ ಆಗಿರುವುವೆ ?

(ಇ) ಸಾಫ್ಟ್‌ವೇರ್ ಎಲೆಕ್ಟ್ರಾನಿಕ್ಸ್ ಇಂಡಸ್ಟ್ರೀಸ್ ಬಗ್ಗೆ ಧಾರವಾಡದಲ್ಲಿಯ ಬೇಲೂರು ಔದ್ಯಮಿಕ ವಸಾಹತುವಿನಲ್ಲಿ ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕಾ ಇಂಧನ ಮತ್ತು ವಕ್ಫ್ ಮಂತ್ರಿಗಳು).—

(ಅ) (೧) ೧೯೮೭ರಲ್ಲಿ ಟಿಕ್ಸಾಕ್ ಸಂಸ್ಥೆಯವರು ತಾಂತ್ರಿಕ ಆರ್ಥಿಕ ಸಮೀಕ್ಷೆಯನ್ನು ನಡೆಸಿದ್ದು, ಸದರಿ ತಾಂತ್ರಿಕ ಆರ್ಥಿಕ ಸಮೀಕ್ಷೆಯ ಆಧಾರದ ಮೇಲೆ ಮುಂದಿನ ಐದು ವರ್ಷಗಳು ಅಂದರೆ ೧೯೮೮-೯೦ರಿಂದ ೧೯೩೩-೯೪ರವರೆಗೆ ಯೋಜನೆಯನ್ನು ತಯಾರಿಸಲಾಗಿದೆ.

(೨) ಎಲ್ಲಾ ತಾಲ್ಲೂಕು ಮಟ್ಟದಲ್ಲಿ ತಾಂತ್ರಿಕ ಆರ್ಥಿಕ ಸಮೀಕ್ಷೆಯು ಪೂರ್ಣಗೊಂಡಿದೆ.

(೩) ಕೈಗಾರಿಕಾ ಸೌಲಭ್ಯಗಳನ್ನು ಅನುಕ್ರಮವಾಗಿ ಎಲ್ಲಾ ತಾಲ್ಲೂಕುಗಳಲ್ಲಿ ಕರ್ನಾಟಕ ರಾಜ್ಯ ಹಣಕಾಸು ನಿಗಮ ಮತ್ತು ಜಿಲ್ಲಾ ಪರಿಷತ್ತುಗಳ ಸಹಯೋಗದಿಂದ ನಡೆಸಲಾಗುತ್ತಿದೆ.

(ಈ) ಈ ಬಗ್ಗೆ ಸಾರ್ವಜನಿಕರು ಹಾಗೂ ಕೈಗಾರಿಕೋದ್ಯಮಗಳಿಗೆ ಕೈಗಾರಿಕಾ ಉತ್ಪಾದನೆ ಬಗ್ಗೆ ಸರ್ಕಾರವು ಪ್ರಕಟಿಸಿರುವ ಪ್ರೋತ್ಸಾಹಕ ಹಾಗೂ ರಿಯಾಯಿತಿಯ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ.

(ಉ) ಎಲ್ಲಾ ತಾಲ್ಲೂಕು ಮುಖ್ಯ ಕೇಂದ್ರಗಳಲ್ಲಿ ಕೈಗಾರಿಕಾ ವಸಾಹತುಗಳನ್ನು ಸ್ಥಾಪನೆಗಾಗಿ ಭೂಸ್ವಾಧೀನ ಕ್ರಮವು ವಿವಿಧ ಹಂತದಲ್ಲಿದ್ದು ಹುಬ್ಬಳ್ಳಿ, ಧಾರವಾಡ, ಕುಂದಗೋಳ, ಶಿಗ್ಗಾವ, ಹಾವೇರಿ, ರಾಣೆಬೆನ್ನೂರು, ಹಿರೇಕೆರೂರು, ಮುಂಡರಗಿ, ರೋಣ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಭೂಸ್ವಾಧೀನಪಡಿಸಲಾಗಿದೆ. ಈಗಾಗಲೇ ಹುಬ್ಬಳ್ಳಿ, ಧಾರವಾಡ, ರಾಣೆಬೆನ್ನೂರು ಮತ್ತು ಗದಗ ತಾಲ್ಲೂಕುಗಳಲ್ಲಿ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಲಾಗಿದೆ.

(ಊ) ಧಾರವಾಡಕ್ಕೆ ಇಂಡಸ್ಟ್ರಿಯಲ್ ಗ್ರೋತ್ ಸೆಂಟರ್ ಮಂಜೂರು ಮಾಡಲಾಗಿದೆ.

(ಋ) ಬೇಲೂರು ಕೈಗಾರಿಕಾ ಪ್ರದೇಶದ ೩ ಬ್ಲಾಕ್‌ಗಳಲ್ಲಿ ಕೈಗಾರಿಕಾ ಪ್ರದೇಶ ನಿರ್ಮಾಣಕ್ಕಾಗಿ ಈ ಕೆಳಕಂಡಂತೆ ಭೂಸ್ವಾಧೀನಪಡಿಸಿಕೊಳ್ಳಲಾಗಿದೆ :—

	ಎಕರೆ ಗುಂಟೆ
ಬ್ಲಾಕ್—೧	೪೯೬.೩೭
ಬ್ಲಾಕ್—೨	೯೯೧.೨೩
ಬ್ಲಾಕ್—೩	೧೧೬.೦೪
ಒಟ್ಟು	೧೫೧೦೪.೨೪

ಈಗಾಗಲೇ ಎರಡು ಮಧ್ಯಮ ದರ್ಜೆಯ ಕೈಗಾರಿಕೆಗಳು ಸದರಿ ಪ್ರದೇಶದಲ್ಲಿ ಸ್ಥಾಪನೆಗೊಂಡಿದ್ದು, ಮತ್ತೊಂದು ಮಧ್ಯಮ ದರ್ಜೆಯ ಕೈಗಾರಿಕಾ ಘಟಕವು ಸ್ಥಾಪನೆ ಹಂತದಲ್ಲಿದೆ. ಇದಲ್ಲದೆ ಎರಡು ಸಣ್ಣ ಪ್ರಮಾಣದ ಕೈಗಾರಿಕೆಗಳು ಸಹ ಸ್ಥಾಪನೆ ಹಂತದಲ್ಲಿದೆ.

(ಇ) ಎಲೆಕ್ಟ್ರಾನಿಕ್ ಇಂಡಸ್ಟ್ರೀಸ್‌ಗಳಿಗೆ ಸುಮಾರು ೧೦೦ ಎಕರೆ ಜಮೀನನ್ನು ಮಿಸಲಿಡಲಾಗಿದೆ, ಮತ್ತು ಸುಮಾರು ೨೦೦ ಎಕರೆ ಜಮೀನನ್ನು ಹೈ ಟೆಕ್ನಿಕ್ ಇಂಡಸ್ಟ್ರೀಸ್ ಕೈಗಾರಿಕೆಗಳಿಗಾಗಿ ಕಾಯ್ದಿರಿಸಲಾಗಿದೆ.

ರಾಜ್ಯದಲ್ಲಿರುವ ಅಂಗವಿಕಲ ಕಲ್ಯಾಣಕ್ಕಾಗಿ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ

೬೬೦ ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).—ಮಾನ್ಯ ಸಮಾಜ ಕಲ್ಯಾಣ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ರಾಜ್ಯದಲ್ಲಿರುವ ಅಂಗವಿಕಲರ ಸಂಖ್ಯೆ ಎಷ್ಟು ? ಈ ಪೈಕಿ ಎಷ್ಟು ಅಂಗವಿಕಲರು ಪ್ರತಿ ತಿಂಗಳು ಮಾಶಾಸನ (ಪಿ.ಎಚ್.ಪಿ.) ಪಡೆಯುತ್ತಿದ್ದಾರೆ ? (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಕಳೆದ ಮೂರು ವರ್ಷಗಳಲ್ಲಿ ಅಂಗವಿಕಲರ ಕಲ್ಯಾಣಕ್ಕಾಗಿ ಯಾವ ಯಾವ ಯೋಜನೆಗಳನ್ನು ರೂಪಿಸಲಾಯಿತು ಹಾಗೂ ಇದಕ್ಕಾಗಿ ವೆಚ್ಚವಾದ ಹಣವೆಷ್ಟು

(ಇ) ಈ ವರ್ಷ ಅಂಗವಿಕಲರ ಕಲ್ಯಾಣಕ್ಕಾಗಿ ಸರ್ಕಾರವು ರೂಪಿಸಿದ್ದ ಯೋಜನೆಗಳೇನು ?

(ಈ) ವಯೋಮಿತಿ ಮೀರಿದ ಅಂಗವಿಕಲರಿಗೆ ಸರ್ಕಾರ ಉದ್ಯೋಗಕ್ಕಾಗಿ ವಯೋಮಿತಿಯನ್ನು ಮತ್ತಷ್ಟು ಹೆಚ್ಚಿಸಲು ಸರ್ಕಾರ ಯೋಜಿಸಿದೆಯೇ ?

(ಉ) ಇಲ್ಲದಿದ್ದರೆ ಕಾರಣಗಳೇನು ?

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾನೂನು, ಸಂಸದೀಯ ವ್ಯವಹಾರ, ವಾರ್ತಾ ಮತ್ತು ಪ್ರವಾಸೋದ್ಯಮ ಮಂತ್ರಿಗಳು) (ಸಮಾಜ ಕಲ್ಯಾಣ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳ ಪರವಾಗಿ).—

(ಅ) ರಾಜ್ಯದಲ್ಲಿರುವ ಅಂಗವಿಕಲರ ನಿಖರವಾದ ಸಂಖ್ಯೆ ಲಭ್ಯವಿರುವುದಿಲ್ಲ.

೨,೧೧,೯೩೪ ಅಂಗವಿಕಲರು ಮಾಶಾಸನ ಪಡೆಯುತ್ತಿದ್ದಾರೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ—Iರಲ್ಲಿ ನೋಡಬಹುದು.

(ಆ) ಅಂಗವಿಕಲರ ಸಮಿಕ್ಷೆ (ಆಯವ್ಯಯವನ್ನು ೧೯೯೦–೯೧ನೇ ಸಾಲಿನಲ್ಲಿ ಒದಗಿಸಿದೆ) ರೂ. ೧೫,೦೦,೦೦೦.೦೦

(೨) ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರ್, ಮೈಸೂರು ರೂ. ೩,೯೮,೨೦೯.೦೦

ಈ ಯೋಜನೆಗಳಲ್ಲದೆ ಇನ್ನೂ ಅನೇಕ ಯೋಜನೆಗಳನ್ನು ಈ ಇಲಾಖೆಯು ಹಮ್ಮಿಕೊಂಡಿದೆ. ಅದನ್ನು ಅನುಬಂಧ—IIರಲ್ಲಿ ನೋಡಬಹುದು.

(ಇ) ೧೯೯೦–೯೧ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳನ್ನು ಯೋಜಿಸಲಾಗಿದೆ.

(೧) ಅಂಗವಿಕಲರ ಸಮೀಕ್ಷೆ

(೨) ಉದ್ಯೋಗಸ್ಥ ಅಂಗವಿಕಲ ಮತ್ತು ತರಬೇತಿದಾರರಿಗೆ ಎರಡು ವಸತಿ ನಿಲಯಗಳು.

(೩) ಅಂದರಿಗಾಗಿ ಒಂದು ಕೈಗಾರಿಕಾ ತರಬೇತಿ ಕೇಂದ್ರವನ್ನು ಗುಲ್ಬರ್ಗಾದಲ್ಲಿ ತೆರೆಯುವುದು.

(೪) ಕಿವುಡು ಮತ್ತು ಅಂದ ಮಕ್ಕಳಿಗೆ ಬೆಂಗಳೂರಿನಲ್ಲಿ ಎರಡು ವಿಶೇಷ ಶಾಲೆಗಳು.

(೫) ದಾವಣಗೆರೆಯಲ್ಲಿ ಅಂದರ ಶಾಲೆಯ ಹೊಸ ಕಟ್ಟಡ ನಿರ್ಮಾಣ.

(ಈ) ಇಲ್ಲ.

(ಉ) ಸಾಮಾನ್ಯ ಜನರಿಗಿರುವ ವಯೋಮಿತಿಗಿಂತ ಅಂಗವಿಕಲರಿಗೆ ಈಗಾಗಲೇ ೧೦ ವರ್ಷಗಳ ರಿಯಾಯಿತಿ ಇರುತ್ತದೆ.